

بِسْمِ اللَّهِ الرَّحْمَنِ الرَّحِيم

# ಅಲ್ಲಾಹನ ಕರುಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **08–06–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

وَاكْتُبْ لَنَا فِي هَٰذِهِ الدُّنْيَا حَسَنَةً وَفِي الْآخِرَةِ إِنَّا هُدْنَا إِلَيْكَ ۚ قَالَ عَذَابِي أُصِيبُ بِهِ مَنْ أَشَاءُ ۖ وَرَحْمَتِي وَسِعَتْ كُلَّ شَيْءٍ ۚ فَسَأَكْتُبُهَا لِلَّذِينَ يَتَّقُونَ وَيُؤْتُونَ الزَّكَاةَ وَالَّذِينَ هُم بِآيَاتِنَا يُؤْمِنُونَ

**ವಕ್ತುಬ್‌ಲನಾ ಫೀ ಹಾಧಿಹಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ, ಇನ್ನಾ ಹುದ್‌ನಾ ಇಲೈಕ. ಖಾಲ ಅದಾಬೀ ಉಸೀಬು ಬಿಹೀ ಮನ್ ಅಶಾಉ ವ ರಹ್ಮತೀ ವಸಿಅತ್ ಕುಲ್ಲಶೈಯಿನ್ ಫಸಅಕ್‌ತುಬುಹಾ ಲಿಲ್ಲದೀನ ಯತ್ತಖೂನ ವ ಯುಅ್‌ತೂನಝ್ಝಕಾತ ವಲ್ಲದೀನ ಹುಮ್ ಬಿಆಯಾತಿನಾ ಯೂಮಿನೂನ್.**

ನಮಗೆ ಈ ಲೋಕದಲ್ಲೂ ಪರಲೋಕದಲ್ಲೂ ಒಳಿತನ್ನು ವಿಧಿಸು. ನಾವು ನಿನ್ನೆಡೆಗೆ (ಪಶ್ಚಾತ್ತಾಪಗೊಂಡು) ಮರಳಿದ್ದೇವೆ. *ಅಲ್ಲಾಹನು* ಹೇಳಿದನು: ನಾನು ಇಚ್ಛಿಸುವವರಿಗೆ (ಅದಕ್ಕೆ ಅರ್ಹರಾದವರಿಗೆ) ನಾನು ಶಿಕ್ಷೆ ವಿಧಿಸುವೆನು. ನನ್ನ ಕರುಣೆಯು ಸರ್ವವನ್ನೂ ಆವರಿಸಿಕೊಂಡಿದೆ. ಆದುದರಿಂದ ಭಯಭಕ್ತಿ ಹೊಂದಿದವರಿಗೂ ಝಕಾತ್ ನೀಡುವವರಿಗೂ ನಮ್ಮ ದೃಷ್ಟಾಂತಗಳಲ್ಲಿ ವಿಶ್ವಾಸವಿರಿಸುವವರಿಗೂ ಅದನ್ನು (ಕರುಣೆಯನ್ನು) ನಾನು ವಿಧಿಸಿದ್ದೇನೆ. (7:157).

ಅಲ್ಲಾಹನು ತನ್ನ ದಾಸರ ಮೇಲೆ ಅದ್ಭುತಕರವಾಗಿ ಔದಾರ್ಯ ತೋರಿಸಿರುವನು. ಅವನ ಕರುಣೆಯು ಪ್ರತಿಯೊಂದು ವಸ್ತುವನ್ನು ಆವರಿಸಿದೆ. ರಹ್ಮತ್ (ಕಾರುಣ್ಯ) ಎಂದರೆ ಮೃದುವಾಗಿರುವಿಕೆ, ಸಹಾನುಭೂತಿ ಹೊಂದುವುದು ಮತ್ತು ಕರುಣೆ ಉಬ್ಬುವುದು. ಅಲ್ಲಾಹನು ತನ್ನ ದಾಸರೊಂದಿಗೆ ಮೃದುವಾಗಿಯೂ ತಪ್ಪುಗಳನ್ನು ನಿರ್ಲಕ್ಷಿಸಿಯೂ ವರ್ತಿಸುತ್ತಾನೆ. ಅದಕ್ಕೆ ಯಾವುದೇ ಕೊನೆಯ ಪರಿಮಿತಿ ಇರುವುದಿಲ್ಲ. ಅಲ್ಲಾಹನ ಕರುಣೆಯ ಭಾವನೆ ಮತ್ತು ವರ್ತನೆ ಎಷ್ಟು ಹೆಚ್ಚು ವರ್ಧಿಸಿರುತ್ತದೆ ಎಂದರೆ ಪ್ರತಿಯೊಂದು ವಸ್ತುವನ್ನು ಅದು ಆವರಿಸಿರುತ್ತದೆ. ಅವನ ಕಾರುಣ್ಯದಲ್ಲಿ ರಹ್ಮಾನಿಯ್ಯತ್ ಮತ್ತು ರಹೀಮಿಯ್ಯತ್ ಸೇರಿವೆ. ಅವನನ್ನು ಬೇಡದಿದ್ದರೂ ಅವನು ಅಸಂಖ್ಯಾತ ವಸ್ತುಗಳನ್ನು ಮನುಷ್ಯನಿಗೋಸ್ಕರ ಸೃಷ್ಟಿಸಿರುವನು. ರಹೀಮಿಯ್ಯತ್ ಎಂಬ ಗುಣವನ್ನು ಅಲ್ಲಾಹನು ತನ್ನ ಹಕ್ಕುಗಳನ್ನು ಈಡೇರಿಸುವವರಿಗೆ, ತನ್ನ ಆಜ್ಞೆಗಳನ್ನು ಪಾಲಿಸುವವರಿಗೆ, ಬಾಗಿ ಬೇಡಿಕೊಳ್ಳುವವರಿಗೆ ಪ್ರಕಟಿಸುತ್ತಾನೆ. ಅಲ್ಲಾಹನು ಹೇಳುತ್ತಾನೆ ದಾಸರನ್ನು ಶಿಕ್ಷಿಸುವುದು ನನ್ನ ಉದ್ದೇಶವಲ್ಲ. ಕೆಲವರಿಗೆ ಬಹಳ ದೊಡ್ಡ ತಪ್ಪು ಗ್ರಹಿಕೆ ಇದೆ. ಶಿಕ್ಷೆ ನೀಡುವುದಾದರೆ ಮನುಷ್ಯನನ್ನು ಸೃಷ್ಟಿಸಿರುವುದು ಏಕೆ ಎಂದು ಅವರು ಕೇಳುತ್ತಾರೆ. ಅಲ್ಲಾಹನು ಹೇಳುತ್ತಾನೆ ಶಿಕ್ಷಿಸುವುದು ನನ್ನ ಉದ್ದೇಶವಲ್ಲ. ನನ್ನ ಶಿಕ್ಷೆಗೆ ಪಾತ್ರರಾಗುವವರು ತಪ್ಪು ಕರ್ಮಗಳ ಶಿಖರವನ್ನು ತಲಪಿದವರಾಗಿದ್ದಾರೆ. ಆದರೆ ನನ್ನ ಶಿಕ್ಷೆ ಸಹ ತಾತ್ಕಾಲಿಕವಾದುದಾಗಿದೆ. ಅದು ಸುಧಾರಣೆಗೋಸ್ಕರವಾಗಿದೆ. ಕೊನೆಗೆ ಒಂದು ಕಾಲ ಬರಲಿದೆ, ನರಕವಾಸಿಗಳು ಸಹ ನನ್ನ ವಿಶಾಲವಾದ ಕಾರುಣ್ಯದ ಭಾಗವನ್ನು ಪಡೆಯುವರು. ಅವರ ಶಿಕ್ಷೆ ಸಹ ಕೊನೆಗೊಳ್ಳುವುದು. ಅಲ್ಲಾಹನು ಶಿಕ್ಷೆ ರಕ್ಷೆಗಳ ದಿನದ ಅಧಿಪತಿಯೂ ಆಗಿದ್ದಾನೆ. ಆದುದರಿಂದ ಅವನು ತನ್ನ ಕಾರುಣ್ಯ ಮತ್ತು ಕ್ಷಮೆಯ ಚಾದರವನ್ನು ನಮ್ಮ ಮೇಲೆ ಹೊದಿಸಿ ನಮ್ಮನ್ನು ಶಿಕ್ಷಿಸದೆ ಬಿಟ್ಟು ಬಿಡಲು ಅಧಿಕಾರ ಹೊಂದಿದ್ದಾನೆ. ಆದರೆ ಅಲ್ಲಾಹನು ಹೇಳುತ್ತಾನೆ: ಭಯಭಕ್ತಿ (ತಖ್ವ) ಹೊಂದಿದವರಿಗೂ, ಝಕಾತ್ ಕೊಡುವವರಿಗೂ, ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವವರಿಗೂ ಅಲ್ಲಾಹನ ವಚನಗಳ ಬಗ್ಗೆ ಪರಿಪೂರ್ಣ ವಿಶ್ವಾಸ ಹೊಂದಿದವರಿಗೂ ನಿಶ್ಚಯವಾಗಿಯೂ ನನ್ನ ಕಾರುಣ್ಯದ ಚಾದರವನ್ನು ಹೊದಿಸುವೆನು. ಏಕೆಂದರೆ ಅದು ಅವರ ಹಕ್ಕಾಗಿರುತ್ತದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳುತ್ತಾನೆ: إِنَّ رَحْمَتَ اللَّهِ قَرِيبٌ مِّنَ الْمُحْسِنِينَ **ಇನ್ನ ರಹ್‌ಮತಲ್ಲಾಹಿ ಖರೀಬುನ್ ಮಿನಲ್ ಮುಹ್‌ಸಿನೀನ್** – ಖಂಡಿತವಾಗಿಯೂ ಅಲ್ಲಾಹನ ಕರುಣೆ ಮುಹ್‌ಸಿನ್‌ಗಳಿಗೆ ಸಮೀಪದಲ್ಲಿದೆ. (7:57). ಮುಹ್‌ಸಿನ್ ಎಂದರೆ ಎಲ್ಲಾ ಶರತ್ತುಗಳಿಗೆ ಬದ್ಧನಾಗಿ ತನ್ನ ಕೆಲಸ ಮಾಡುವವನು. ತಖ್ವದ ಆವಶ್ಯಕತೆಗಳನ್ನು ಈಡೇರಿಸುವವನು, ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವವನು, ಅಲ್ಲಾಹನ ವಚನಗಳ ಬಗ್ಗೆ ಪರಿಪೂರ್ಣ ವಿಶ್ವಾಸ ಹೊಂದಿರುವವನು, ಅಲ್ಲಾಹನ ಮುಂದೆ ಬಾಗಿ ಬೇಡಿಕೊಳ್ಳುವವನು, ಇಂತಹ ವ್ಯಕ್ತಿಗೆ ಅಲ್ಲಾಹನ ಕಾರುಣ್ಯ ತಲಪುವುದು. ಆದುದರಿಂದ ಸತ್ಯ ವಿಶ್ವಾಸಿಯಾದವನು ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು, ತಖ್ವದಲ್ಲಿ ನೆಲೆನಿಂತು ಅನುಷ್ಠಾನ ಕರ್ಮಗಳನ್ನು ಮಾಡಲು ಮತ್ತು ವಿಶ್ವಾಸ ಪರಿಪೂರ್ಣವಾಗಲು ಧಾರಾಳ ಪ್ರಯತ್ನ ಮಾಡಬೇಕಾಗಿದೆ.

ಇಲ್ಲಿ ಅಲ್ಲಾಹನು ತಖ್ವದ ಬಗ್ಗೆ ಮೊದಲು ಹೇಳಿದ್ದಾನೆ. ವಾಸ್ತವಿಕವಾಗಿ ತಖ್ವದ ಬಗ್ಗೆ ಸರಿಯಾದ ಪ್ರಜ್ಞೆ ಇದ್ದಲ್ಲಿ ಇತರ ಒಳಿತುಗಳಲ್ಲಿ ಮತ್ತು ವಿಶ್ವಾಸದಲ್ಲಿ ಪರಿಪೂರ್ಣತೆ ಗಳಿಸುವುದು ತಖ್ವದೊಳಗೆಯೇ ಇರುವುದಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: ಮನುಷ್ಯನ ಆಧ್ಯಾತ್ಮಿಕ ಸೌಂದರ್ಯವಿರುವುದು ತಖ್ವದ ಎಲ್ಲಾ ಸೂಕ್ಷ್ಮ ಮಾರ್ಗಗಳಲ್ಲಿ ಹೆಜ್ಜೆ ಹಾಕುವುದರಲ್ಲಾಗಿದೆ. ತಖ್ವದ ಸೂಕ್ಷ್ಮ ಮಾರ್ಗಗಳು ಆಧ್ಯಾತ್ಮಿಕ ಸೌಂದರ್ಯದ ಸೂಕ್ಷ್ಮ ನಕ್ಷೆಗಳೂ ಸುಂದರ ರೇಖೆಗಳೂ ಆಗಿವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ತಖ್ವಕ್ಕೆ ಲಿಬಾಸ್ (ಪೋಷಾಕು) ಎಂಬ ಹೆಸರು ನೀಡಿದ್ದಾನೆ.

ಲಿಬಾಸುತ್ತಖ್ವಾ ಪವಿತ್ರ ಖುರ್‌ಆನ್ ಬಳಸಿದ ಶಬ್ದವಾಗಿದೆ. ಆಧ್ಯಾತ್ಮಿಕ ಸೌಂದರ್ಯ ತಖ್ವದಿಂದಲೇ ಹುಟ್ಟುತ್ತದೆ ಎನ್ನುವುದನ್ನು ಇದು ಸೂಚಿಸುತ್ತದೆ. ತಖ್ವ ಎಂದರೆ ಮನುಷ್ಯನು ಅಲ್ಲಾಹನ ಎಲ್ಲಾ ಅಮಾನತ್‌ಗಳನ್ನು, ವಿಶ್ವಾಸಕ್ಕೆ ಸಂಬಂಧಿಸಿದ ಎಲ್ಲಾ ಪ್ರತಿಜ್ಞೆಗಳನ್ನು ಮತ್ತು ಅದೇ ರೀತಿ ಸೃಷ್ಟಿಗಳಿಗೆ ಸಂಬಂಧಿಸಿದ ಎಲ್ಲಾ ಅಮಾನತ್‌ಗಳನ್ನು ಮತ್ತು ಪ್ರತಿಜ್ಞೆಗಳನ್ನು ಸಾಧ್ಯವಿರುವ ಸರ್ವಶಕ್ತಿಯನ್ನು ಬಳಸಿ ಈಡೇರಿಸುವುದಾಗಿದೆ. ಅವುಗಳ ಸೂಕ್ಷ್ಮಾತಿಸೂಕ್ಷ್ಮ ಪಾರ್ಶ್ವಗಳನ್ನು ಗಮನದಲ್ಲಿರಿಸಿ ಕಾರ್ಯನಿರತನಾಗುವುದಾಗಿದೆ. ಮನುಷ್ಯರು ಈ ಮಟ್ಟವನ್ನು ತಲಪಿದರೆ ಆಗ ಅಲ್ಲಾಹನ ಕರುಣೆಯನ್ನು ಗಳಿಸುವುದು ಅವನ ಹಕ್ಕಾಗುತ್ತದೆ. ದಾಸನು ತನ್ನ ಹಕ್ಕಿನ ರೂಪದಲ್ಲಿ ಅಲ್ಲಾಹನಿಂದ ಅರ್ಹತೆ ಪಡೆಯುವುದು ಎಂತಹ ವಿಶಿಷ್ಟ ಸ್ಥಾನವಾಗಿದೆ.

ನಾವು ಈಗ ರಮಝಾನಿನ ಕೊನೆಯ ವಾರದಲ್ಲಿದ್ದೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ, ರಮಝಾನ್ ಆಗಮಿಸುವಾಗ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುತ್ತವೆ ಮತ್ತು ನರಕದ ಬಾಗಿಲುಗಳು ಮುಚ್ಚಲ್ಪಡುತ್ತವೆ. ಶೈತಾನನು ಸಂಕೋಲೆಗಳಲ್ಲಿ ಬಂಧಿತನಾಗುತ್ತಾನೆ. ರಮಝಾನ್‌ನಿಂದ ಸತ್ಯವಿಶ್ವಾಸಿಗಳೇ ಲಾಭಗಳಿಸುತ್ತಾರೆ. ಸರಿಯಾದ ರೀತಿಯಲ್ಲಿ ವಿಶ್ವಾಸಿಯಾಗಿರುವವನೇ ಅದರ ಲಾಭ ಪಡೆಯುತ್ತಾನೆ. ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವನೇ ಅದರಿಂದ ಲಾಭ ಗಳಿಸುತ್ತಾನೆ. ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸತ್ಯವಿಶ್ವಾಸದ ಆವಶ್ಯಕತೆಗನುಸಾರವಾಗಿ ಅಲ್ಲಾಹನಿಂದ ಅನುಗ್ರಹ ಗಳಿಸಲು ಸಂಕಲ್ಪದೊಂದಿಗೆ ರಮಝಾನಿನ ರಾತ್ರಿಗಳಲ್ಲಿ ಎದ್ದು ಯಾರು ನಮಾಝ್ ಮಾಡುತ್ತಾರೋ ಅವನ ಹಿಂದಿನ ಪಾಪಗಳು ಕ್ಷಮಿಸಲ್ಪಡುತ್ತವೆ. ಆದುದರಿಂದ ಈ ದಿನಗಳಲ್ಲಿ ಲಾಭ ಪಡೆದವರು ಅದೃಷ್ಟಶಾಲಿಗಳಾಗಿದ್ದಾರೆ. ಅದೂ ಅಲ್ಲದೆ ರಮಝಾನಿನ ಕೊನೆಯ ದಿನಗಳಲ್ಲಿ **ಲೈಲತುಲ್ ಖದ್ರ್** ಅನ್ವೇಷಿಸಲು ಸಹ ನಮ್ಮ ಗಮನ ಸೆಳೆಯಲಾಗಿದೆ – ಪ್ರಾರ್ಥನೆಗಳ ಅಂಗೀಕಾರದ ಮೊದಲಿಗಿಂತ ಹೆಚ್ಚಿನ ಮಟ್ಟದ ದೃಶ್ಯಗಳು ನಾವು ಕಾಣುವಂತಾಗಲಿಕ್ಕೆ. ಇದು ನಮ್ಮ ಹಕ್ಕೇನೂ ಅಲ್ಲ. ಅದು ಅಲ್ಲಾಹನ ಒಂದು ಅನುಗ್ರಹವಾಗಿದೆ. ದಾಸರನ್ನು ತನ್ನ ಸಾಮೀಪ್ಯ ಗಳಿಸುವಂತೆ ಪ್ರೇರೇಪಿಸಲಿಕ್ಕಾಗಿದೆ. ಇದು ಸಹ ಅಲ್ಲಾಹನ ಕರುಣೆಯ ವೈಶಾಲ್ಯತೆಯಾಗಿದೆ.

ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ರಮಝಾನಿನ ಪ್ರಥಮ ಹತ್ತು ದಿನಗಳು ರಹ್ಮತ್ ಆಗಿದೆ. ಅದರ ಮಧ್ಯದ ಹತ್ತು ದಿನಗಳು ಮಗ್‌ಫಿರತ್ ಆಗಿದೆ. ಕೊನೆಯ ಹತ್ತು ದಿನಗಳು ನರಕಾಗ್ನಿಯಿಂದ ರಕ್ಷಣೆ ನೀಡುವುದಾಗಿದೆ. ಆದರೆ ಅಲ್ಲಾಹನ ರಹ್ಮತ್ ಕೇವಲ ರಮಝಾನಿನ ಹತ್ತು ದಿನಗಳಿಗೆ ಮಾತ್ರ ಸೀಮಿತವಾಗಿರಲಾರದು. ಅದು ಪ್ರಥಮ ಹತ್ತು ದಿನಗಳಿಂದ ಮಧ್ಯದ ಹತ್ತು ದಿನಗಳಿಗೂ ಕೊನೆಯ ಹತ್ತು ದಿನಗಳಿಗೂ ಪ್ರವೇಶಿಸುತ್ತದೆ. ತಖ್ವದಲ್ಲಿ ನೆಲೆನಿಂತಿರುವ ಮನುಷ್ಯನಿಗೆ ಅದು ಸ್ಥಿರವಾಗಿರುತ್ತದೆ. ಅದೇ ರೀತಿ ಅಲ್ಲಾಹನು ಕ್ಷಮಿಸುವುದು ರಮಝಾನಿನ ಮಧ್ಯದ ಹತ್ತು ದಿನಗಳಲ್ಲಿ ಮಾತ್ರವಲ್ಲ. ರಮಝಾನಿನ ಕೊನೆಯ ತನಕ ಮತ್ತು ಅನಂತರ ಸಹ ಅದು ಮನುಷ್ಯನೊಂದಿಗಿರುತ್ತದೆ. ಹಾಗೆಯೇ ನರಕಾಗ್ನಿಯಿಂದ ರಕ್ಷಣೆ ಪಡೆಯುವುದು ರಮಝಾನಿನ ಈ ಕೊನೆಯ ಹತ್ತು ದಿನಗಳಲ್ಲಿ ಮಾತ್ರವಲ್ಲ. ಅಲ್ಲಾಹನ ಕಾರುಣ್ಯದಿಂದ ಲಾಭ ಪಡೆದು ಅಲ್ಲಾಹನಿಂದ ಕ್ಷಮೆಯನ್ನು ಬೇಡಿಕೊಂಡು ರಮಝಾನ್ ದಾಟಿದ ನಂತರ ಸಹ ನರಕಾಗ್ನಿಯಿಂದ ಮನುಷ್ಯನು ದೂರವಿರಬಹುದಾಗಿದೆ. ಯಾರಾದರೂ ರಮಝಾನಿನ ನಂತರ ತಖ್ವದಿಂದ ದೂರ ಸರಿಯುವುದಾದರೆ ಅವನ ಸ್ಥಿತಿ ಒಂದು ಭದ್ರಕೋಟೆಯನ್ನು ತನ್ನ ರಕ್ಷಣೆಗೆ ನಿರ್ಮಿಸಿ, ನಂತರ ಅದನ್ನು ಸ್ವತಃ ಕೆಡವಿ ಹಾಕುವವನ ಹಾಗಿದೆ. ಅಲ್ಲಾಹನ ರಹ್‌ಮತ್ ಕೇವಲ ಕೆಲವು ದಿನಗಳಿಗೆ ಸೀಮಿತವಾಗಿರುವುದಿಲ್ಲ. ಅವನ ಮಗ್‌ಫಿರತ್ (ಕ್ಷಮೆ) ಸಹ ಕೆಲವು ದಿನಗಳಿಗೆ ಸೀಮಿತವಾಗಿರುವುದಿಲ್ಲ. ನರಕಾಗ್ನಿಯಿಂದ ರಕ್ಷಿಸುವುದು ಸಹ ಸೀಮಿತ ಕಾಲಾವಧಿಗೆ ಆಗಿರುವುದಿಲ್ಲ.

ನಾನು ಪಠಿಸಿದ ವಚನಗಳನ್ನು ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಹೇಳುತ್ತಾನೆ ನಾನು ಇಚ್ಛಿಸುವವರಿಗೆ ಶಿಕ್ಷೆ ನೀಡುತ್ತೇನೆ ಮತ್ತು ನನ್ನ ರಹ್ಮತ್ (ಕಾರುಣ್ಯ) ಎಲ್ಲಾ ವಸ್ತುಗಳನ್ನು ಆವರಿಸಿದೆ. ಪ್ರತಿಯೊಂದು ರೀತಿಯ ಶಿರ್ಕ್, ಕುಫ್ರ್ ಮತ್ತು ಅಶ್ಲೀಲ ಕೃತ್ಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವವರಿಗೆ ಮತ್ತು ಝಕಾತ್ ನೀಡುವವರಿಗೆ, ನಮ್ಮ ವಚನಗಳನ್ನು ಪರಿಪೂರ್ಣವಾಗಿ ನಂಬುವವರಿಗೆ ನನ್ನ ರಹ್‌ಮತನ್ನು ಬರೆದಿಡುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಲ್ಲಿ ತಖ್ವ ಎಂಬ ಪದಕ್ಕೆ ಮೂರು ಅರ್ಥ ನೀಡಿದ್ದಾರೆ. ಶಿರ್ಕ್‌ನಿಂದ ರಕ್ಷಿಸಿಕೊಳ್ಳುವುದು, ಕುಫ್ರ್‌ನಿಂದ ರಕ್ಷಿಸಿಕೊಳ್ಳುವುದು ಮತ್ತು ಅಶ್ಲೀಲ ಕೃತ್ಯಗಳಿಂದ ದೂರವಿರುವುದು. ಈಗ ಹೆಜ್ಜೆ ಹೆಜ್ಜೆಗಳಲ್ಲಿ ಅಶ್ಲೀಲ ಕೃತ್ಯಗಳ ಸಾಮಗ್ರಿಗಳಿವೆ. ನಿರರ್ಥಕವೂ ಲಘುವೂ ಆಗಿರುವ ಸಾಮಗ್ರಿಗಳಿವೆ. ಟಿ.ವಿ.ಯಲ್ಲಿ, ಇಂಟರ್‌ನೆಟ್‌ನಲ್ಲಿ ಮತ್ತು ಬೇರೆ ಮೀಡಿಯಾದಲ್ಲಿ. ನಿರರ್ಥಕವೂ ಲಘುಕರವೂ ಆಗಿರುವ ಕಾರ್ಯಕ್ರಮಗಳನ್ನು ನೋಡದೆ ರಕ್ಷಿಸಿಕೊಳ್ಳುವುದು ಸಹ ಅಲ್ಲಾಹನ ಕಾರುಣ್ಯವನ್ನು ಗಳಿಸುವ ಮಾರ್ಗವಾಗಿರುತ್ತದೆ. ಕೇವಲ ರಮಝಾನಿನಲ್ಲಿ ಮಾತ್ರವಲ್ಲ ಸ್ಥಿರವಾಗಿ ಅವುಗಳಿಂದ ರಕ್ಷಿಸಿಕೊಳ್ಳುವುದು ಆವಶ್ಯಕವಾಗಿದೆ. ಇವುಗಳು ಯುವಜನರನ್ನು ಮಾತ್ರವಲ್ಲ ದೊಡ್ಡವರ ಬುದ್ಧಿಯನ್ನೂ ವಿಷಮಯವನ್ನಾಗಿ ಮಾಡುತ್ತವೆ. ಸ್ವಭಾವಗುಣಗಳು ಕೆಟ್ಟು ಹೋಗುತ್ತಿವೆ. ವಿಶ್ವಾಸ ದೂರ ಸರಿಯುತ್ತದೆ. ಆದುದರಿಂದ ಅಹ್ಮದಿಯರು ಇದರ ಬಗ್ಗೆ ಶ್ರದ್ಧೆ ಹರಿಸಬೇಕಾಗಿದೆ. ಅವುಗಳ ಉಪಯೋಗವನ್ನು ಜಾಗರೂಕತೆಯಿಂದ ಸರಿಯಾದ ರೀತಿಯಲ್ಲಿ ಮಾಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ವಚನದಿಂದ ತಿಳಿಯುವುದೇನೆಂದರೆ ಅಲ್ಲಾಹನ ರಹ್ಮತ್ ಸಾಮಾನ್ಯವಾಗಿರುವುದೂ ವಿಶಾಲವಾಗಿರುವುದೂ ಆಗಿದೆ. ಅಲ್ಲಾಹನ ದ್ವೇಷದ ಗುಣವು ದೈವಿಕ ನಿಯಮಗಳನ್ನು ಮೀರಿ ವರ್ತಿಸುವಾಗ ತನ್ನ ಹಕ್ಕನ್ನು ಪಡೆಯುತ್ತದೆ. ಅಲ್ಲಾಹನು ಯಾರಿಗಾದರೂ ಶಿಕ್ಷೆ

ನೀಡುವುದಾದರೆ ಅದು ಅವನು ಅಲ್ಲಾಹನ ನಿಯಮವನ್ನು ಉಲ್ಲಂಘಿಸಿದುದಕ್ಕಾಗಿರುತ್ತದೆ. ಹಿಂದೆ ಹೇಳಿದ ಹಾಗೆ ಈ ಶಿಕ್ಷೆ ಸಹ ಸುಧಾರಣೆಗೋಸ್ಕರವಾಗಿರುತ್ತದೆ. ಕೊನೆಗೆ ಅಲ್ಲಾಹನ ರಹ್ಮತ್ ಜಯಶಾಲಿ ಆಗುತ್ತದೆ. ಮನುಷ್ಯನು ತೌಬ ಮಾಡುವಾಗ, ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುವಾಗ, ಅಳಲಿನಿಂದ ಪ್ರಾರ್ಥಿಸುವಾಗ, ಅಲ್ಲಾಹನನ್ನು ಬೇಡಿಕೊಳ್ಳುವಾಗ ಎಂದರೆ ಅಲ್ಲಾಹನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವಾಗ, ಅಲ್ಲಾಹನು ಶಿಕ್ಷೆ ನೀಡುವುದನ್ನು ತನಗೆ ಕಡ್ಡಾಯ ಗೊಳಿಸಿಲ್ಲವಾದುದರಿಂದ ಅವನು ಅಂತಹ ಜನರಿಗೆ ಕಾರುಣ್ಯ ನೀಡುವುದನ್ನು ತನಗೆ ಕಡ್ಡಾಯಗೊಳಿಸಿರುತ್ತಾನೆ. ಅಲ್ಲಾಹನ ರಹ್‌ಮತ್ ಅವನ ಗಝುಬ್ (ಕೋಪ)ದ ಆವಶ್ಯಕತೆಗಳ ಮೇಲೆ ಜಯಗಳಿಸಿರುತ್ತದೆ ಮತ್ತು ಗಝುಬ್ (ಕೋಪ) ಅದೃಶ್ಯವಾಗಿ ಪರದೆಗಳ ಹಿಂದೆ ಮರೆಯಾಗುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಸ್ತಿಗ್‌ಫಾರ್ (ಕ್ಷಮೆಯಾಚನೆ) ಬಗ್ಗೆ ಹೀಗೆ ಹೇಳುತ್ತಾರೆ: ವಾಸ್ತವಿಕವಾಗಿ ಇಸ್ತಿಗ್‌ಫಾರ್ ಎಂಬುದು ಮನುಷ್ಯಸಹಜವಾದ ಬಲಹೀನತೆ ತನ್ನಿಂದ ಪ್ರಕಟವಾಗದಿರಲಿ ಎಂದು ಬೇಡಿಕೊಳ್ಳುವುದರ ಹೆಸರಾಗಿದೆ. ಮನುಷ್ಯಪ್ರಕೃತಿಗೆ ಅಲ್ಲಾಹನು ತನ್ನ ಶಕ್ತಿಯ ಮೂಲಕ ಸಹಾಯ ನೀಡಲಿ ಎಂದೂ ತನ್ನ ನೆರವಿನ ವಲಯದ ಒಳಗೆ ಸೇರಿಸಿಕೊಳ್ಳಲಿ ಎಂದೂ ಬೇಡಿಕೊಳ್ಳುವುದಾಗಿದೆ. ಅಲ್ಲಾಹನು ಮನುಷ್ಯನ ಸೃಷ್ಟಿಕರ್ತನಾಗಿರುವ ಕಾರಣ ಮನುಷ್ಯನ ಬಾಹ್ಯ ಮತ್ತು ಆಂತರಿಕವಾದ ಶಕ್ತಿಗಳನ್ನು ಸೃಷ್ಟಿಸಿದವನಾಗಿದ್ದಾನೆ. ಅವನು ಮನುಷ್ಯನನ್ನು ನೆಲೆ ನಿಲ್ಲಿಸುವವನೂ ಆಗಿದ್ದಾನೆ. ಸೂರತುಲ್ ಫಾತಿಹದ ಈ ವಚನದಲ್ಲೂ ಇದರ ಸೂಚನೆಯಿದೆ. **ಇಯ್ಯಾಕ ನಅ್‌ಬುದು ವಇಯ್ಯಾಕ ನಸ್ತಈನ್ –** ನಾವು ನಿನ್ನನ್ನೇ ಆರಾಧಿಸುತ್ತೇವೆ, ನಿನ್ನಿಂದಲೇ ಸಹಾಯ ಯಾಚಿಸುತ್ತೇವೆ. ನಿನ್ನ ಖಯ್ಯೂಮಿಯತ್ (ನೆಲೆ ನಿಲ್ಲುವಿಕೆ) ಮತ್ತು ನಿನ್ನ ರುಬೂಬಿಯ್ಯತ್ (ಪರಿಪಾಲನೆ ಮಾಡುವ ಗುಣ) ನಮಗೆ ಸಹಾಯ ನೀಡಲಿ. ನಮ್ಮನ್ನು ತಪ್ಪುಗಳಿಂದ ರಕ್ಷಿಸಲಿ. ನಮ್ಮ ಬಲಹೀನತೆ ಪ್ರಕಟವಾಗಿ ನಾವು ಆರಾಧನೆ ಮಾಡಲು ಸಾಧ್ಯವಾಗದಂತೆ ಆಗದಿರಲಿ.

ಇಸ್ತಿಗ್‌ಫಾರ್ ಬಗ್ಗೆ ಇನ್ನಷ್ಟು ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಲವರು ಹೇಗಿರುತ್ತಾರೆಂದರೆ ಅವರಿಗೆ ಪಾಪಕೃತ್ಯಗಳ ಬಗ್ಗೆ ತಿಳಿದಿರುತ್ತದೆ. ಕೆಲವರಿಗೆ ಪಾಪಕೃತ್ಯಗಳ ಬಗ್ಗೆ ತಿಳಿದಿರುವುದಿಲ್ಲ. ಆದುದರಿಂದ ಯಾವಾಗಲೂ ಇಸ್ತಿಗ್‌ಫಾರ್ ಮಾಡಬೇಕೆಂದು ಅಲ್ಲಾಹನು ಕಡ್ಡಾಯ ಗೊಳಿಸಿದ್ದಾನೆ. ಮನುಷ್ಯನಿಗೆ ತನ್ನ ಪಾಪಗಳ ಬಗ್ಗೆ, ಬಾಹ್ಯ ಅಥವಾ ಆಂತರಿಕ ಪಾಪಗಳ ಬಗ್ಗೆ ತಿಳಿದಿದ್ದರೂ ತಿಳಿದಿರದಿದ್ದರೂ ಕೈ, ಕಾಲು, ನಾಲಗೆ, ಮೂಗು, ಕಿವಿ ಮತ್ತು ಕಣ್ಣು ಇವುಗಳಿಂದ ಸಂಭವಿಸಬಹುದಾದ ಎಲ್ಲಾ ವಿಧಗಳ ಪಾಪಕೃತ್ಯಗಳಿಗೋಸ್ಕರ ಇಸ್ತಿಗ್‌ಫಾರ್ ಮಾಡುತ್ತಾ ಇರಬೇಕು. ಇಂದಿನ ಕಾಲದಲ್ಲಿ ಹಝ್ರತ್ ಆದಮ್ ಅಲೈಹಿಸ್ಸಲಾಮರ ದುಆ ಮಾಡುತ್ತಿರಬೇಕು. ಅದು ಹೀಗೆ: رَبَّنَا ظَلَمْنَا أَنفُسَنَا وَإِن لَّمْ تَغْفِرْ لَنَا وَتَرْحَمْنَا لَنَكُونَنَّ مِنَ الْخَاسِرِينَ **ರಬ್ಬನಾ ಝುಲಮ್‌ನಾ ಅನ್‌ಫುಸನಾ ವ ಇನ್‌ಲಮ್ ತಗ್‌ಫಿರ್‌ಲನಾ ವ ತರ್‌ಹಮ್‌ನಾ ಲನಕೂನನ್ನ ಮಿನಲ್ ಖಾಸಿರೀನ್ –** ನಮ್ಮ ಪ್ರಭೂ, ನಾವೇ ನಮ್ಮ ಮೇಲೆ ಅಕ್ರಮವಾಗಿ ವರ್ತಿಸಿದೆವು. ನೀನು ನಮ್ಮನ್ನು ಕ್ಷಮಿಸಿಬಿಟ್ಟು ನಮ್ಮ ಮೇಲೆ ಕರುಣೆ ತೋರಿಸದಿದ್ದರೆ ಖಂಡಿತವಾಗಿಯೂ ನಾವು ನಷ್ಟಹೊಂದಿದವರಾಗುವೆವು. (7:24). ಈ ದುಆ ಪ್ರಥಮವಾಗಿ ಅಲ್ಲಾಹನಿಂದ ಅಂಗೀಕಾರ ಪಡೆದ ದುಆ ಆಗಿದೆ. ಆದುದರಿಂದ ನೀವು ನಿರ್ಲಕ್ಷ್ಯತೆಯಿಂದ ಜೀವಿಸುವವರಾಗಬಾರದು. ಯಾರು ನಿರ್ಲಕ್ಷ್ಯತೆಯಿಂದ ಜೀವಿಸುವುದಿಲ್ಲವೋ ಅವನಿಗೆ ಅವನ ಶಕ್ತಿಗೆ ಮೀರಿದಂತಹ ವಿಪತ್ತು ಬಂದೆರಗುವುದು ಖಂಡಿತವಾಗಿಯೂ ಅಸಂಭವನೀಯವಾಗಿದೆ. ಯಾವುದೇ ವಿಪತ್ತು ಅಲ್ಲಾಹನ ಅನುಮತಿ ಇಲ್ಲದೆ ಬಂದೆರಗಲಾರದು. ಅಲ್ಲಾಹನು ನನಗೆ ಇಲ್‌ಹಾಮ್ ಮೂಲಕ ಈ ದುಆ ಕಲಿಸಿರುವನು. **ರಬ್ಬಿ ಕುಲ್ಲು ಶೈಯಿನ್ ಖಾದಿಮುಕ, ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ** – ಓ ನನ್ನ ಪ್ರಭು, ಪ್ರತಿಯೊಂದು ನಿನ್ನ ಸೇವಕನಾಗಿದೆ. ಓ ನನ್ನ ಪ್ರಭು, ನನ್ನನ್ನು ಸಂರಕ್ಷಿಸು, ನನಗೆ ನೆರವು ನೀಡು. ನನ್ನ ಮೇಲೆ ದಯೆದೋರು.

ಇಸ್ತಿಗ್‌ಫಾರ್ ಮತ್ತು ತೌಬದ ವ್ಯತ್ಯಾಸದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಸ್ತಿಗ್‌ಫಾರ್ ಮತ್ತು ತೌಬ ಬೇರೆ ಬೇರೆ ಆಗಿವೆ. ಇಸ್ತಿಗ್‌ಫಾರ್ ಮೂಲಕ ಅಲ್ಲಾಹನಿಂದ ಶಕ್ತಿಯನ್ನು ಗಳಿಸಲಾಗುತ್ತಿದೆ. ತೌಬ ಮಾಡುವುದು 'ಓ ಅಲ್ಲಾಹ್ ನಾವು ನಿನ್ನಿಂದ ಬೇಡಿಕೊಂಡ ಮಗ್‌ಫಿರತ್‌ನಲ್ಲಿ ನಾವು ಸ್ಥಿರವಾಗಿರುವಂತೆ ಮಾಡು' ಎಂಬುದಕ್ಕಾಗಿದೆ. ಅಲ್ಲಾಹನ ನಡೆವಳಿಕೆ ಹೇಗಿದೆ ಎಂದರೆ ಅಲ್ಲಾಹನಿಂದ ಸಹಾಯ ಬೇಡಿದಾಗ ಅವನು ಒಂದು ಶಕ್ತಿಯನ್ನು ಕೊಡುತ್ತಾನೆ. ಈ ಶಕ್ತಿಯಿಂದ ಮನುಷ್ಯನು ತನ್ನ ಪಾದದಲ್ಲಿ ನಿಲ್ಲುತ್ತಾನೆ ಮತ್ತು ಒಳಿತುಗಳನ್ನು ಮಾಡಲು ಒಂದು ಶಕ್ತಿಯನ್ನು ಗಳಿಸುತ್ತಾನೆ.

ತೌಬದ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತೌಬ ಎಂದರೆ ಅರಬಿ ಭಾಷೆಯಲ್ಲಿ ಮರಳಿ ಹೋಗುವುದು ಎಂದು ಅರ್ಥವಾಗಿದೆ. ಇದೇ ಕಾರಣದಿಂದ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನ ಹೆಸರು ತವ್ವಾಬ್ ಎಂದಾಗಿದೆ. ಎಂದರೆ ಬಹಳ ಸಾರಿ ಮರಳಿ ಬರುವವನು. ಇದರ ಅರ್ಥವೇನೆಂದರೆ ಮನುಷ್ಯನು ಪಾಪಕೃತ್ಯಗಳನ್ನು ಕೈಬಿಟ್ಟು ಸತ್ಯ ಹೃದಯದೊಂದಿಗೆ ಅಲ್ಲಾಹನ ಕಡೆಗೆ ಮರಳಿದರೆ ಅಲ್ಲಾಹನು ಅವನಿಗಿಂತ ಹೆಚ್ಚಿನ ಮಟ್ಟದಲ್ಲಿ ಅವನ ಕಡೆಗೆ ಮರಳುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯವಾದ ತೌಬದ ಬಗ್ಗೆ ಹೀಗೆ ಹೇಳುತ್ತಾರೆ: ಸತ್ಯವಾದ ತೌಬಕ್ಕೆ ಮೂರು ಶರತ್ತುಗಳಿವೆ. ಮೊದಲನೆಯದಾಗಿ ಕೆಟ್ಟ ಯೋಚನೆಗಳು ಹುಟ್ಟುವಂತಹ ಎಲ್ಲಾ ವಿಷಯಗಳನ್ನು ನಿಮ್ಮ ಮನಸ್ಸಿನಿಂದ ದೂರ ಸರಿಸಬೇಕು. ಎರಡನೆಯದಾಗಿ ಯಾವುದಾದರೂ ತಪ್ಪು ಕೆಲಸ ಮಾಡುವ ಬಗ್ಗೆ ಮತ್ತು ದುಷ್ಕೃತ್ಯದ ಬಗ್ಗೆ ಗಮನ ಹರಿಯುವಾಗ ನಾಚಿಕೆ ಮತ್ತು

ಪಶ್ಚಾತ್ತಾಪ ಉಂಟಾಗಬೇಕು. ಮೂರನೆಯದಾಗಿ ನಾನು ಈ ಕೆಡುಕುಗಳ ಸಮೀಪ ಸಹ ಹೋಗಲಾರೆನು ಎಂದು ದೃಢನಿರ್ಧಾರ ಮಾಡಿ ಅದರಲ್ಲಿ ಸ್ಥಿರವಾಗಿರಲು ಇಚ್ಛಾಶಕ್ತಿ ಸಹ ಗಳಿಸಬೇಕು. ಅದರೊಂದಿಗೆ ಪ್ರಾರ್ಥನೆ ಸಹ ಮಾಡಬೇಕು. ಆಗ ಈ ಕೆಡುಕುಗಳು ಕೊನೆಗೊಳ್ಳುವುವು. ಅವುಗಳ ಸ್ಥಾನದಲ್ಲಿ ಒಳಿತುಗಳು ಬರಲು ತೊಡಗುವುವು.

ಇಸ್ತಿಗ್‌ಫಾರ್ ಮತ್ತು ತೌಬದ ಮೂಲಕ ನರಕಾಗ್ನಿಯಿಂದ ರಕ್ಷಣೆ ಗಳಿಸುವ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತೌಬದಿಂದ ಮನುಷ್ಯನ ಲೌಕಿಕ ವ್ಯವಹಾರ ಮತ್ತು ಧಾರ್ಮಿಕತೆ ಇವುಗಳೆರಡೂ ಸರಿಪಡಿಸಲ್ಪಡುತ್ತವೆ. ಅಲ್ಲಾಹನು ಹೀಗೆ ಪ್ರಾರ್ಥಿಸಲು ಹೇಳಿದ್ದಾನೆ: رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً وَقِنَا عَذَابَ النَّارِ **ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅದ್ಾ಼ಬನ್ನಾರ್** – ನಮ್ಮ ಪ್ರಭೂ, ನಮಗೆ ಇಹಲೋಕ ಜೀವನದಲ್ಲಿ ಒಳಿತನ್ನು ಅನುಗ್ರಹಿಸು. ಹಾಗೆಯೇ ಪರಲೋಕ ಜೀವನದಲ್ಲಿ ಸಹ ಒಳಿತನ್ನು ದಯಪಾಲಿಸು ಮತ್ತು ಅಗ್ನಿಯಿಂದ ನಮ್ಮನ್ನು ರಕ್ಷಿಸು. (2:202). ವಾಸ್ತವಿಕವಾಗಿ **ರಬ್ಬನಾ** ನಮ್ಮ ಪ್ರಭು ಎಂಬ ಪದದಲ್ಲಿಯೇ ತೌಬದ ಕಡೆಗೆ ಒಂದು ಸೂಕ್ಷ್ಮ ಸೂಚನೆ ಇದೆ. ರಬ್ಬನಾ ಎಂಬ ಶಬ್ದ ಸೂಚಿಸುವುದೇನೆಂದರೆ ಮನುಷ್ಯನು ಬೇರೆ ಕೆಲವರನ್ನು ಪ್ರಭುವನ್ನಾಗಿ ಮಾಡಿದ್ದನು. ಅವರಿಂದ ಬೇಸರ ಹೊಂದಿ ಅವನು ಈ ಪ್ರಭುವಿನ ಕಡೆಗೆ ಬಂದಿದ್ದಾನೆ. ವಾಸ್ತವಿಕ ಹೃದಯಾರ್ದ್ರತೆ ಮತ್ತು ನೋವು ಇಲ್ಲದೆ ಈ ಶಬ್ದ ಹೃದಯದಿಂದ ಹೊರಗೆ ಬರಲಾರದು. ಅಲ್ಲಾಹನನ್ನು ಮಾತ್ರ ತಮ್ಮ ಪ್ರಭುವಾಗಿ ತಿಳಿದುಕೊಂಡವರೇ ಹೀಗೆ ಹೇಳಬಲ್ಲರು. ತಮ್ಮ ಪ್ರಭುವಿನೆದುರಿಗೆ ಅನ್ಯ ಪ್ರಭುಗಳೆಲ್ಲವೂ ಮಿಥ್ಯ ಎಂದು ಅವರಿಗೆ ದೃಢ ವಿಶ್ವಾಸವಿದೆ.

ಅಗ್ನಿ ಎಂದು ಹೇಳಿದುದು ಕೇವಲ ಖಿಯಾಮತ್ ದಿನದ ನರಕಾಗ್ನಿ ಮಾತ್ರವಲ್ಲ. ಲೋಕದಲ್ಲಿ ದೀರ್ಘಾಯುಸ್ಸು ಪಡೆದವನು ಕಾಣುತ್ತಾನೆ ಲೋಕದಲ್ಲಿ ಸಾವಿರಾರು ರೀತಿಯ ಅಗ್ನಿಗಳಿವೆ ಎಂದು. ಆದುದರಿಂದ ಸತ್ಯವಿಶ್ವಾಸಿ ಪ್ರಾರ್ಥಿಸುವುದು ಎಲ್ಲಾ ವಿಧಗಳ ಅಗ್ನಿಯಿಂದ ನಮ್ಮನ್ನು ರಕ್ಷಿಸು. ನಾವು ನಿನ್ನ ಆಶ್ರಯಬೇಡುತ್ತಿದ್ದೇವೆ. ಜೀವಿತವನ್ನು ಕಹಿಯನ್ನಾಗಿ ಮಾಡುವ ಮತ್ತು ಮನುಷ್ಯನಿಗೆ ಅಗ್ನಿಯಾಗಿರುವ ಎಲ್ಲವುಗಳಿಂದಲೂ ನಮ್ಮನ್ನು ರಕ್ಷಿಸು ಎಂದು ಬೇಡಿಕೊಳ್ಳಲಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಜಮಾಅತಿನ ಶ್ರದ್ಧೆಯನ್ನು ಈ ದುಆದ ಕಡೆಗೆ ಸೆಳೆದು ಹೇಳಿದ್ದರು: ನಮ್ಮ ಜಮಾಅತಿನವರು رَبَّنَا آتِنَا فِي الدُّنْيَا حَسَنَةً وَفِي الْآخِرَةِ حَسَنَةً وَقِنَا عَذَابَ النَّارِ **ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅದ್ಾ಼ಬನ್ನಾರ್** ಎಂಬ ದುಆ ಬಹಳ ಹೆಚ್ಚು ಹೆಚ್ಚಾಗಿ ಮಾಡಬೇಕೆಂದು.

ನಾವು ಈಗ ಸಹ ಈ ಪ್ರಾರ್ಥನೆ ಮಾಡುತ್ತಾ ಇರಬೇಕು. ಅಲ್ಲಾಹನು ತನ್ನ ಕಾರುಣ್ಯದಲ್ಲಿ ನಮ್ಮನ್ನು ತೆಗೆದುಕೊಂಡು ಎಲ್ಲಾ ವಿಧಗಳ ಲೌಕಿಕ ಮತ್ತು ಪರಲೋಕದ ಅಗ್ನಿಯಿಂದ ನಮ್ಮನ್ನು ರಕ್ಷಿಸಿಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿರುವುದರ ಸಾರಾಂಶ, ಓ ನನ್ನ ದಾಸರೇ, ನೀವು ನನ್ನ ಬಗ್ಗೆ ಭರವಸೆ ಇಲ್ಲದವರಾಗಬೇಡಿರಿ. ನಾನು ರಹೀಮ್, ಕರೀಮ್, ಸತ್ತಾರ್ ಮತ್ತು ಗಫೂರ್ ಆಗಿರುವೆನು. ಎಲ್ಲರಿಗಿಂತ ಮಿಗಿಲಾಗಿ ನಿಮ್ಮ ಮೇಲೆ ದಯೆದೋರುವವನಾಗಿರುವೆನು. ನಾನು ನಿಮಗೆ ದಯೆದೋರುವ ಹಾಗೆ ಬೇರೆ ಯಾರೂ ದಯೆದೋರಲಾರರು. ನನ್ನ ಕಡೆಗೆ ಮರಳುವವನು ನನ್ನ ಬಾಗಿಲು ತೆರೆದಿರುವುದಾಗಿ ಕಾಣುವನು. ನಾನು ತೌಬ ಮಾಡುವವರ ಪಾಪದೋಷಗಳನ್ನು ಅವು ಪರ್ವತಕ್ಕಿಂತ ಹೆಚ್ಚಾಗಿದ್ದರೂ ಕ್ಷಮಿಸುವೆನು. ನಿಮ್ಮ ಮೇಲೆ ನನ್ನ ದಯೆ ಬಹಳ ಹೆಚ್ಚಿಗೆ ಇದೆ. ಮತ್ತು ಕೋಪ ಕಡಿಮೆ ಇದೆ. ಏಕೆಂದರೆ ನೀವು ನನ್ನ ಸೃಷ್ಟಿಗಳಾಗಿರುವಿರಿ. ನಾನೇ ನಿಮ್ಮನ್ನು ಸೃಷ್ಟಿಸಿದೆನು. ಆದುದರಿಂದ ನನ್ನ ಕರುಣೆ ನಿಮ್ಮೆಲ್ಲರನ್ನೂ ಆವರಿಸಿದೆ.

ನಾವು ಅಲ್ಲಾಹನ ಕಡೆಗೆ ನಿಷ್ಠಾವಂತರಾಗಿ ಹೋಗುವವರಾಗುವಂತೆ ಅಲ್ಲಾಹನು ಮಾಡಲಿ. ನಾವು ತಖ್ವವನ್ನು ಗಳಿಸುವವರನ್ನಾಗಿ ಅಲ್ಲಾಹನು ಮಾಡಲಿ. ನಾವು ನಮ್ಮ ವಿಶ್ವಾಸದಲ್ಲಿ ವೃದ್ಧಿ ಗಳಿಸುವವರನ್ನಾಗಿ ಅವನು ಮಾಡಲಿ. ನಾವು ಯಾವಾಗಲೂ ಅವನ ಕಾರುಣ್ಯದ ಪಾಲು ಪಡೆಯುವವರಾಗಲಿ. ನಾವು ಅಲ್ಲಾಹನ ಕಾರುಣ್ಯದಿಂದ ವಂಚಿತರಾಗುವ ಮತ್ತು ನಮ್ಮ ಕೆಟ್ಟ ಕೃತ್ಯಗಳ ಕಾರಣದಿಂದ ಅವನ ಶಿಕ್ಷೆಗೆ ಪಾತ್ರರಾಗುವಂತಹ ಕಾಲ ಎಂದೂ ಬರದಿರಲಿ. ಅಲ್ಲಾಹನ ಕಾರುಣ್ಯದ ದೃಷ್ಟಿ ಯಾವಾಗಲೂ ನಮ್ಮ ಮೇಲಿರುವಂತಾಗಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 08-06-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon